O.S. NO. 162/2021
DW – 1 .
Dated 02–07–2025

ಸಾಕ್ಷಿಯನ್ನು ಈ ದಿನ ದಿನಾಂಕ 02–07–2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಬಿ ಬಿ ಎಚ್ ವಕೀಲರಿಂದಃ

ಎನ್ ಎ ಸ್ವತ ನಾನೇ ಮಾಡಿಸಿರುತ್ತೇನೆ. ಬೇರೇ ಯಾರಿಗೂ ಕಾಂಟ್ರಾಕ್ಟ ಕೊಟ್ಟಿರಲಿಲ್ಲ. ನಿಡಿ – 34 ಕೊಟ್ಟಿರುವ ದುರದುಂಡೇಶ್ವರ ಪಾಟೀಲ ಬಹುತೇಕ ಕಿತ್ತೂರ ಊರಿನವರು ಇರುತ್ತಾರೆ. ಅವರ ತಂದೆ ಮತ್ತು ದೊಡ್ಡಪ್ಪ ತುಂಬಾ ಬೇಕಾದವರು ಇರುತ್ತಾರೆ ಎಂದರೆ ಸರಿ. ನಿಡಿ – 34 ಎಸ್ಟಿಮೆಶನ ಯಾವಾಗ ಮಾಡಿಸಿರುತ್ತೇನೆ ಎಂದು ಈಗ ನನಗೆ ನೆನಪಿಲ್ಲ. ಪ್ರಸ್ತುತ ದಾವೆ ಸಲ್ಲಿಸುವ ಪೂರ್ವ ಎಸ್ಟಿಮೆಟ ಮಾಡಿಸಿರುತ್ತೇನೆ. ಈಗ ತೊರಿಸಿದ ನಿಡಿ – 34 ರಲ್ಲಿ ಯಾವುದು ತಾರೀಕು ಕಾಣಿಸಿರುವುದಿಲ್ಲ ಎಂದರೆ ಸರಿ. ನಿಡಿ – 34 ರಲ್ಲಿ ಯಾವ ಸರ್ವೆ ನಂಬರ ಮತ್ತು ಎಷ್ಟು ಕ್ಷೇತ್ರ ಕ್ಕಾಗಿ ಎಸ್ಟಿಮೆಶನ ಅಂತಾ ಕಾಣಿಸಿಲ್ಲ ಎಂದರೆ ನಾನು ಈಗ ನನ್ನ ಚಸಮಾ ತಂದಿಲ್ಲ ಹೀಗಾಗಿ ಸರಿಯಾಗಿ ನೊಡಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ನಿಡಿ – 34 ರಲ್ಲಿ ಕ್ಷೇತ್ರ, ಗ್ರಾಮ, ಮತ್ತು ಸರ್ವೆ ನಂಬರ ಯಾವುದು ಸಹ ಕಾಣಿಸಿರುವುದಿಲ್ಲ ಎಂದರೆ ನಾನು ನೊಡಿಲ್ಲ ಅದನ್ನು ಹಾಗೇಯೇ ಇಟ್ಟು ಕೊಂಡಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಾನು ಹಾಜರು ಪಡಿಸಿದ ಬಾವಚಿತ್ರಗಳಲ್ಲಿ ಲೆ ಔಟನಲ್ಲಿ ಡಾಂಬರ ರಸ್ತೆ ಮಾಡಿರುತ್ತಾರೆ. ಸದರಿ ಡಾಂಬರ ರಸ್ತೆ ಯಾರ ಕಡೆಯಿಂದ ಮಾಡಿಸಿರುತ್ತೇನೆ ಮತ್ತು ಡಾಂಬರ ಮಿಕ್ಸರ ಯಾರು ತಂದರು ಮತ್ತು ಎಷ್ಟು ಬ್ಯಾರಲ ಡಾಂಬರ ಮತ್ತು ಜಲ್ಲಿ

ಎಷ್ಟು ತಂದರು ಎಂದು ನನಗೆ ಹೇಳಲು ಬರುವುದಿಲ್ಲ. ಡಾಂಬರ ರಸ್ತೆ ಕೆಲಸ ನಾನೇ ಮಾಡಿಸಿರುತ್ತೇನೆ. ಡಾಂಬರ ಯಾರ ಕಡೆಯಿಂದ ತರಿಸಿದ್ದೇ ಎಂದು ಈಗ ನನಗೆ ನೆನಪಿಲ್ಲ. ನಾನು ಲೆ ಔಟನಲ್ಲಿ ಡಾಂಬರ ರಸ್ತೆ ಮಾಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಿ ದಾವಾ ಆಸ್ತಿ ಸ್ಥಳ ಪರಿಶಿಲನೆ ಮಾಡಿಸಲು ನನ್ನದು ಯಾವುದು ತಕರಾರು ಇರುವುದಿಲ್ಲ. ನನ್ನ ಲೆಔಟ ಮತ್ತು ಬೇರೆಯವರ ಲೆ ಔಟ ಸೇರಿ ಕೆ ಇಬಿಯವರಿಂದ ವಿದ್ಯುತ ಸಂಪರ್ಕ ಪಡೆದಿರುತ್ತೇವೆ. ಸರ್ವೆ ನಂ 1/2 ನಮ್ಮದು ಮತ್ತು ಸರ್ವೆ ನಂ 1/6 ಬೆರೆಯವರದು ಎಂದರೆ ನಿಜ. ಬೇರೆಯವರು ಯಾರು ಎಂದರೆ ಮಹಾಂತೇಶ ದಿವಾನರದು ಇರುತ್ತದೆ. ಸದರಿಯವರು ಪ್ರಸ್ತುತ ಪ್ರಕರಣದಲ್ಲಿ 2 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ ಯವರದು ಎಷ್ಟು ಎಕರೆ ಲೆಔಟ ಇದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸೇರಿ ಕೆ ಇ ಬಿಯಿಂದ ವಿದ್ಯುತ ಸಂಪರ್ಕ ಮಾತ್ರ ಪಡೆದ್ದೆವ ಉಳಿದನ್ನು ಪ್ರತ್ಯೆಕವಾಗಿ ಮಾಡಿಕೊಂಡಿದ್ದೇವೆ. ಎನ ಎ ಲೆಔಟ ಕುರಿತು ನಾನು ಮತ್ತು 2 ನೇ ಪ್ರತಿವಾದಿ ಸೇರಿ ಅರ್ಜಿ ಹಾಕಿರುತ್ತೇವೆ ಮತ್ತು ಒಟ್ಟಿಗೆ ಲೆ ಔಟ ಅಪ್ರೂವಲ ಮಾಡಿಸಿರುತ್ತೆವೆ ಎಂದರೆ ಸರಿಯಲ್ಲ. ಈಗಲು ಸಹ ಲೆ ಔಟ ಉತಾರಗಳು ನನ್ನ ಮತ್ತು 2 ನೇ ಪ್ರತಿವಾದಿ ಹೆಸರಿನಲ್ಲಿ ಜಂಟಿ ಆಗಿ ಬರುತ್ತಿದೆ ಎಂದರೆ ಸರಿ. ಈಗ ತೊರಿಸಿದ ದಾಖಲೆ ನಗರ ಮತ್ತು ಗ್ರಾಮಂತರ ಯೊಜನಾ ಇಲಾಖೆಯವರು ನೀಡಿರುವ ತಾಂತ್ರಿಕ ಅನುಮೊದನೆ ಛಾಯಾ ಪ್ರತಿ ಇದೆ ಎಂದರೆ ಸರಿ. ಸಾಕ್ಷಿ ಅದನ್ನು ನೊಡಿ ಗುರುತಿಸಿದ್ದರಿಂದ ಅದನ್ನು ನಿಪಿ – 26 ಎಂದು

ಗುರುತಿಸಲಾಯಿತು. ಸರ್ವೆ ನಂ 1/6 ರ ಲೆಔಟ ನ ಭಾವಚಿತ್ರಗಳನ್ನು ತೆಗೆದ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸರ್ವೆ ನಂಬರರವರು ಲೆ ಔಟನ್ನು ಡೆವಲಪ ಮಾಡಿರುವುದಿಲ್ಲ ಎಂದ ಸ್ವತ ನುಡಿದಿರುತ್ತಾರೆ.

ದಾವಾ ಹಾಕುವ ಪೂರ್ವ ನಾನು ಮತ್ತು ನನ್ನ ಸಹೊದರ ವಾದಿಯ ಗಂಡ ಸೇರಿ 10-12 ಪ್ಲಾಟಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ 10-12 ಪ್ಲಾಟಗಳು ಪೈಕಿ ಕೆಲಮೊಂದು ಲೆಔಟ ಡೆವಲಪಮೆಂಟ ಮಾಡುವ ಪೂರ್ವದಲ್ಲಿ ಮತ್ತು ಕೆಲಮೊಂದು ಡೆವಲಪಮೆಂಟ ಮಾಡಿದ ನಂತರ ಮಾಡಿರುತ್ತೇವೆ. ಡೆವಲಪಮೆಂಟ ಯಾವಾಗ ಮಾಡಿಸಿದ್ದೀರಿ ಎಂದರೆ ನನಗೆ ನೆನಪಿಲ್ಲ. ಸದರಿ ಡೆವಲಪಮೆಂಟ ಆದ ಪ್ಲಾಟಗಳು ಪ್ರತಿ ಒಂದಕ್ಕೆ ಪ್ಲಾಟಗೆ ರೂ. 3 ಲಕ್ಷಕ್ಕೆ ಒಂದರಂತೆ ಮಾರಾಟ ಮಾಡಿರುತ್ತೇವೆ. ಸದರಿ ಮಾರಾಟದಿಂದ ಬಂದ ಹಣದಲ್ಲಿ ನನ್ನ ಸಹೋದರಿನಿಗೂ ಸಹ ಅರ್ಧ ಹಿಸ್ಸೆ ಕೊಟ್ಟಿರುತ್ತೇನೆ. ಈ ಕುರಿತು ನಾನು ಅವನಿಂದ ರಶೀದಿ ಪಡೆದುಕೊಂಡಿರುವುದಿಲ್ಲ. ಆ ಸಮಯದಲ್ಲಿ ನಾನು ನನ್ನ ಸಹೋದರನಿಗೆ ಸಾಲಗಳು ಬಹಳ ಇರುವುದರಿಂದ ಅವನಿಂದ ಡೆವಲಪಮೆಂಟ ಖರ್ಚು ಕೊಡುವಂತೆ ಕೇಳಿಲ್ಲ. ಆತ ಇಂಡಸ್ಟರ್ರಿಯಲ ಎರಿಯಾಗೆ ದುಡಿಯಲು ಹೊದಲ್ಲಿ ರೂ. 70-80 ಸಾವಿರ ಸಾಲ ಮಾಡಿದ್ದನು. ಲೆಔಟ ಡೆವಲಪಮೆಂಟ ಕುರಿತು ನಾನು ಕೆನರಾ ಬ್ಯಾಂಕ ಮತ್ತು ಎಮ್ ಜಿ ಬ್ಯಾಂಕ ಸಾಲ ಮಾಡಿದ್ದೇನು. ಸದರಿ 2 ಬ್ಯಾಂಕಗಳು ಕಿತ್ತೂರ ಶಾಖೆ ಬ್ಯಾಂಕುಗಳು. ಎಷ್ಟು ನೇ ಇಸವಿಯಲ್ಲಿ

O.S. NO. 162/2021
DW - 1 .
Dated 02-07-2025

ಸಾಲ ಮಾಡಿದ್ದೆ ಎಂದು ನನಗೆ ಈಗ ಇಸವಿ ನೆನಪಿಲ್ಲ. ಸದರಿ ಬ್ಯಾಂಕಗಳ ಪಾಸಬುಕ ಇದಾವಾ ಎಂದರೆ ಸಾಕ್ಷಿ ಅವುಗಳನ್ನು ಹುಡುಕಬೇಕು ಎಂದು ಸಾಕ್ಷಿ ನುಡಿದಿರುತ್ತಾರೆ. ಎಮ್ ಜಿ ಬ್ಯಾಂಕನಲ್ಲಿ ಎಷ್ಟು ಸಾಲ ಮತ್ತು ಕೆನರಾ ಬ್ಯಾಂಕನಲ್ಲಿ ಎಷ್ಟು ಸಾಲ ಮಾಡಿದ್ದೇ ಎಂದು ನನಗೆ ನೆನಪಿಲ್ಲ. ಖಾಸಗಿ ವ್ಯಕ್ತಿಗಳ ಕಡೆ ಲಕ್ಷಾಂತರ ರೂಪಾಯಿ ಸಾಲ ಪಡೆದಿದ್ದೆ, ನಿಖರವಾಗಿ ಎಷ್ಟು ಲಕ್ಷ ಎಂದು ಹೇಳಲು ಬರುವುದಿಲ್ಲ. ಸದರಿ ಖಾಸಗಿ ವ್ಯಕ್ತಿಗಳು ಯಾರು ಯಾರು ಎಂದರೆ ಈಗ ಅವರ ಹೆಸರು ನೆನಪಿಲ್ಲ. ಸಾಕ್ಷಿ ಮುಂದುವರೆದು ಅವಶ್ಯಕತೆ ಇದ್ದಾಗ ಸದರಿಯವರ ಹತ್ತಿರ ಸಾಲ ಪಡೆಯುತ್ತಿದ್ದೆ ಎಂದು ನುಡಿದಿರುತ್ತಾರೆ. ಪ್ಲಾಟ ಮಾರಿದ ಹಣದಿಂದ ನಾನು ಲೆಔಟ ಡೆವಲಪಮೆಂಟ ಮಾಡಿರುತ್ತೇನೆ ಹೊರತು ವಯಕ್ತಿಕವಾಗಿ ನನ್ನ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ . ನಾನು ಯಾವ್ರೋ ಖರ್ಚು ಮಾಡಿಲ್ಲದ ಕಾರಣ ನನಗೆ ನೆನಪಿಲ್ಲ ಎಂದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಟೊಗ್ರಪರ ತಾನೇ ತ್ವತೇ ಬಂದು ತನ್ನ ಮೊಬೈಲದಿಂದ ಪೊಟೊ ತೆಗೆದು ಕೊಂಡು ಹೊಗಿ ಪ್ರಿಂಟ ಹಾಕಿ ಕೊಟ್ಟಿರುತ್ತಾರೆ. ಪೊಟೂಗಳು ಯಾವಾಗ ತೆಗೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಹಾಜರುಪಡಿಸಿದ ರಶೀದಿಗಳಲ್ಲಿ ಮತ್ತು ಬಿಲ್ಲುಗಳಲ್ಲಿ ಜಿ ಎಸ್ ಟಿ ನಂಬರ ಎಲ್ಲಿಯೂ ಕಾಣಿಸಿಲ್ಲ ಎಂದರೆ ಸಾಕ್ಷಿ ದೊಡ್ಡ ವ್ಯಾಪಾರ ಮಾಡುವವರು ಜಿ ಎಸ್ ಟಿ ಇರುತ್ತದೆ ಸಣ್ಣ ವ್ಯಾಪಾರ ಮಾಡುವವರ ಹತ್ತಿರ ಜಿ ಎಸ್ ಟಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಒಳಸಂಗ ರವರು ನನ್ನ ಸಂಬಂದಿಕರು ಎಂದರೆ ಸರಿಯಲ್ಲ, ಪರಿಚಯಸ್ಥರು ಮಾತ್ರ ಇರುತ್ತಾರೆ. ನಾನು ಕೊಟ್ಟ ದಾಖಲಾತಿಗಳು ನಾನೇ ಖರ್ಚು ಮಾಡಿ ಲೆಔಟ

ಡೆವಲಪಮೆಂಟ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.